**ವ್ಯಾಖ್ಯಾನ**

# ನಕ್ಷತ್ರಗಳ ಕಂಡ ನರನಿಗೆ

**Ref.:** Dr. A.B. Shamachar, Haridasa Hrudaya, Srimadhwa Grantha Prakashana, Bengaluru (2016), page No. 88.

ಉಗಾಭೋಗದ ಚಿಂತನೆ:

**ನಕ್ಷತ್ರ ಸೂಸಿ ಕಂಡ ನರಗೆ ಉತ್ತಮ ಸಂಧ್ಯಾ**

**ನಕ್ಷತ್ರ ಒಂದೆರಡು ಕಂಡ ನರಗೆ ಮಧ್ಯಮ ಸಂಧ್ಯಾ**

**ನಕ್ಷತ್ರ ದೂರ ಕಾಣದ ನರಗೆ ಅಧಮ ಸಂಧ್ಯಾ**

**ನಕ್ಷತ್ರ ಬಿಟ್ಟರೆ ನಾರಾಯಣ ಪುರಂದರವಿಟ್ಠಲ ಬಿಡುವ ll**

ಸಂಧ್ಯಾವಂದನೆಯನ್ನು ಮಾಡುವುದು ಯಾವಾಗ ಪ್ರಾಶಸ್ತ್ಯಕಾಲವೆಂದು ಹೇಳಿದರು. ಉಪನೀತರಾದವರಿಗೆ ಸಂಧ್ಯಾವಂದನೆ ಕಡ್ಡಾಯವೆಂದು ಹೇಳುವರು.

**ಕಾಲ ಕಾಲದ ಸಂಧ್ಯಾವಂದನೆ ಅಲ್ಪವೆಂದು**

**ನಿರಾಕರಿಸೆ ಶ್ರುತಿ ಸ್ಮೃತಿ ಸಾರುತಿದೆ**

**ಸಕಲ ಪ್ರಯಾಸವು ಮಾಡಲು ಬಂಜೆಗೆ**

**ಮಕ್ಕಳಾಗೋದೇನೋ ಮೂಢ ಕೇಳೋ**

**ಬಕಧ್ವಂಸಿ ಲಕ್ಷ್ಮೀಕಾಂತವಿಟ್ಠಲ ಮೆಚ್ಚುವನೇನೋ ll - ಶ್ರೀಲಕ್ಷ್ಮೀಕಾಂತದಾಸರು**

ತ್ರಿಕಾಲ ಸಂಧ್ಯಾವಂದನೆ ಯಾವಾಗ ಮಾಡುವುದು ಸೂಕ್ತವೆಂದು ತಿಳಿಸುವರು.

**ನಕ್ಷತ್ರ ಕಾಣದ ಪ್ರಾತಃ ಸಂಧ್ಯಾ ಅಧಮ**

**ನಕ್ಷತ್ರ ಪತಿಯನುಜ ಕೃಷ್ಣಚಕ್ರವ ಪಿಡಿದ**

**ನಕ್ಷತ್ರ ಕಂಡರೆ ನಿಶದಿ ಅಧಮ**

**ಈಕ್ಷಿಸಿ ಮಧ್ಯಾಹ್ನದಿ ಸಂಧ್ಯಾವಂದನೆ ಗೈಯೆ**

**ಅಕ್ಷಯಾನಂತ ಶ್ರೀನಾರಾಯಣವಿಟ್ಠಲ**

**ಮೋಕ್ಷವ ಕೊಡುವನು ಈಪರಿಚರಿಸಲು ll – ಶ್ರೀ ನಾರಾಯಣ ವಿಠಲರು**

ತ್ರಿಕಾಲ ಸಂಧ್ಯಾಕಾಲದಲ್ಲಿ ಗಾಯತ್ರೀ ಜಪವನ್ನು ಮಾಡುವ ವಿಧಿಯನ್ನು ತಿಳಿಸುವರು.

**ಉದಾಯಕಾಲದ ಜಪ ನಾಭಿಗೆ ಸರಿಯಾಗಿ**

**ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ**

**ವದನಕ್ಕೆ ಸಮವಾಗಿ ಸಾಯಂಕಾಲ ನಿತ್ಯ**

**ಪದುಮನಾಭ ತಂದೆ ಪುರಂದರವಿಟ್ಠಲಗೆ**

**ಇದೆ ಗಾಯತ್ರಿಯಿಂದ ಜಪಿಸಬೇಕು ll – ಶ್ರೀ ಪುರಂದರ ದಾಸರು**

ಅನಾದಿಕಾಲದಿಂದ ಪರಂಪರಾಗತವಾಗಿ ಬಂದ ಈ ತ್ರಿಕಾಲ ಸಂಧ್ಯಾವಂದನೆ ಒಂದು ಅದ್ಭುತ ಮಂತ್ರ-ತಂತ್ರ ಸಂಕಲನ. ಇಲ್ಲಿ ಎಲ್ಲವೂ ಅಡಕವಾಗಿದೆ. ಕ್ರಮಬದ್ಧವಾಗಿದೆ. ಋಷಿ ಮುನಿಗಳಿಂದ ಸಂಸ್ಕೃತವಾಗಿದೆ. ವೇದೋದಿತ ಈ ಸಂಧ್ಯಾ ಅಧಿಕಾರಿಗಳಿಗೆ ಕಡ್ಡಾಯ.

* * * * * *

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು. ಲೇಖಕರ ಅನುಮಾನತಿಯೊಂದಿಗೆ.